ಚಿತ್ತಾಕರ್ಷಕ ಮುಖಪುಟ ಹೊತ್ತ ಮಳೆಯ ವಿಶೇಷ ಸಂಚಿಕೆ ಮುದನೀಡಿತು. 'ಎಲ್ಲಿಯೂ ನಿಲ್ಲದ ಪಯಣಿಗ: ನಾಗತಿಹಳ್ಳಿ ಚಂದ್ರಶೇಖರ' (ಸಂ: ರಘುನಾಥ ಚ.ಹ.) ಸಂದರ್ಶನ ಸೊಗಸಾಗಿ ಮೂಡಿಬಂದಿದೆ.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**

ಈ ಸಂಚಿಕೆಯ ಮಾತು–ಕತೆ – 'ಎಲ್ಲಿಯೂ ನಿಲ್ಲದ ಪಯಣಿಗ: ನಾಗತಿಹಳ್ಳಿ ಚಂದ್ರಶೇಖರ' ಅರ್ಥವತ್ತಾಗಿದೆ.

**ಸುಂದರ್, ಬೆಂಗಳೂರು**

'ಮಳೆ ವಿಶೇಷ' ಸಂಚಿಕೆ ತಾನೂ ತೋಯ್ದು ನಮ್ಮನ್ನು ಮಳೆಯಲ್ಲಿ ತೋಯಿಸಿ ಮನಸ್ಸಿಗೆ ಮುದ ನೀಡಿದೆ.

**ನಿರ್ಮಲಾ ವೀರಣ್ಣ, ಬೆಂಗಳೂರು**

ಮಳೆಯ ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ. ಇಸ್ಸಾನ ಹಾಯ್ಕುಗಳು, ಶಶಿ ತರೀಕೆರೆ, ತಿರುಮಲ ಮುಂಡರ್ಗಿ ಅವರ ಕವನಗಳು, ಮೊಗಳ್ಳಿ ಗಣೇಶ್ ಅವರ ಅತಿ ಸಣ್ಣಕತೆಗಳು ಹೊಸ ಲೋಕಕ್ಕೆ ಕರೆದೊಯ್ದವು.


**ಬಿ.ಆರ್. ಅಣ್ಣಾಸಾಗರ, ಸೇಡಂ**

'ಮಳೆಯ ದಿನ ಹಾಡಿನ ತನನ' ಪ್ರಬಂಧ (ಛಾಯಾ ಭಗವತಿ) ಓದಿದಾಗ ಮಲೆನಾಡಿನ ಮಳೆ, ಹೆಸರೇ ಗೊತ್ತಿಲ್ಲದ ಕಾಡುಹಣ್ಣುಗಳು, ಸೌದೆಒಲೆಯಲ್ಲಿ ಬೇಯಿಸುತ್ತಿದ್ದ ರಾಗಿ ರೊಟ್ಟಿ ನೆನಪಾದವು.

**ಅನಾಮಿಕಾ, ಮೈಸೂರು**

'ಡಬಲ್ ಎಂಜಿನ್' (ಗಜೇಂದ್ರ ಗುಂಜೂರ್) ಹಾಗೂ 'ಕಜ್ಜಿ' (ಕೇಶವರೆಡ್ಡಿ ಹಂದ್ರಾಳ) ಕತೆಗಳು ಕುತೂಹಲ ಕೆರಳಿಸಿದವು.

**ಸೂರ್ಯನಾರಾಯಣ ಕೆ., ಮಂಡ್ಯ**




'ರಂಗವಿಹಂಗಮ' ಅಂಕಣದ 'ರಂಗದ ಆಚೆಗೂ ನಾಯಕರಾದ ಚಿಂದೋಡಿ ವೀರಪ್ಪ' (ಎನ್. ಜಗನ್ನಾಥ ಪ್ರಕಾಶ್) ಲೇಖನ ಓದಿ ಮನ ತಣಿಯಿತು.

**ಅಮೃತೇಶ್ ತಂಡರ, ಅಣ್ಣಿಗೇರಿ**

'ಡಬಲ್ ಎಂಜಿನ್' (ಗಜೇಂದ್ರ ಗುಂಜೂರ್) ಕತೆ ಹಾಗೂ 'ತಿಪ್ಪೆಗೆ ಹಾಕಿದರೂ ಲೆಕ್ಕ ತಪ್ಪಬಾರದು' (ಗುರುಪ್ರಸಾದ ಕಾಗಿನೆಲೆ) ಲಲಿತ ಪ್ರಬಂಧ ಚೆನ್ನಾಗಿವೆ. ಅನುವಾದಿತ ಕತೆ 'ಅವಲಂಬಿತರು' (ಮೂಲ: ಮಾಲತಿ ಜೋಶಿ, ಕನ್ನಡಕ್ಕೆ: ಲೀಲಾ ನಾಯಿಕ) ಬದುಕಿಗೆ ಹತ್ತಿರವಿದೆ.

**ಸಂಧ್ಯಾ ಭಟ್, ಮುಂಬಯಿ**

ತಿರುಮಲ ಮುಂಡರ್ಗಿ ಅವರ ಕವಿತೆಗಳು ಬಹಳ ಮೆಚ್ಚುಗೆಯಾದವು.

**ಮುಕುಂದ ಹೆರಕಲ್ಲ, ಕಲಬುರ್ಗಿ**

ಪತ್ತೆದಾರಿ ಕತೆ 'ಚದುರಂಗ' (ವಾಸುದೇವ ಮೂರ್ತಿ ಪಿ.) ಕುತೂಹಲದಿಂದ ಓದಿಸಿಕೊಂಡಿತು.

**ಅನುರಾಧಾ ಪೈ, ಮಂಗಳೂರು**